ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

1) 6108

2. ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ವಿಲೇವಾರಿಮಾಡಲು ಈಗ ಅನುಸರಿಸುತ್ತಿರುವ ಧಾನದಿಂದ ವಿಲೇವಾರಿಯಲ್ಲಿ ತಡವಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಆದರೂ ಸಹ ಲವು ಮುಖ್ಯ ಕಾರಣಗಳು ಈ ಕೆಳಗಿನಂತಿವೆ.

ಅ) ನ್ಯಾಯಾಧೀಶರ ಹುದ್ದೆಗಳು ಖಾಲಿ ಇದೆ.

ಆ) ಕಕ್ಷಿದಾರರು ಸಕಾಲದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗದೇ ಇರುವುದರಿಂದ ಮತ್ತು

ಇ) ವಕೀಲರು ಸಕಾಲದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗದೇ ಇರುವುದರಿಂದ

3. ನ್ಯಾಯಾದೀಶರ ಹುದ್ದೆಗಳನ್ನು ಉಚ್ಚನ್ಯಾಯಾಲಯವು ಭರ್ತಿ ಮಾಡಬೇಕಾಗಿ ವುದರಿಂದ, ಉಚ್ಚ ನ್ಯಾಯಾಲಯವನ್ನು ಸಂಪರ್ಕಿಸಲಾಗಿದೆ.

ಬಾರ್ಡ್ ಸಹಾಯದಿಂದ ಕೈಗೊಳ್ಳಲಿರುವ ಕಾಮಗಾರಿಗಳು

2015 - ಡಾ|| ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೊಳ್ಳಲು ನಿರ್ಧರಿಸಿರುವ ಯೋಜನೆಗಳಾವುವು?

ಆ) ಅದಕ್ಕೆ ಒದಗಿಸಲಾಗಿರುವ ಮೊತ್ತವೆಷ್ಟು ಹಾಗೂ ಖರ್ಚಾಗಿರುವ ಹಣವೆಷ್ಟು (ತಾಲ್ಲೂಕುವಾರು ಯೋಜನವಾರು ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೊಳ್ಳಲಾಗುವುದು.

ಆ) 1996-97ನೇ ಸಾಲಿನಲ್ಲಿ133 ಕೋಟಿ ರೂ. ಗಳ ಅಂದಾಜು ಒಪ್ಪಿತವಾಗಿದೆ. ಇದರಲ್ಲಿ ಸ್ತೆಗಳಿಗೆ 78.38 ಕೋಟಿ ರೂ. ಹಾಗೂ ಸೇತುವೆಗಳಿಗೆ 55.41 ಕೋಟಿ ರೂ. ಒಪ್ಪಿತವಾಗಿದೆ. 997 - 98ರಲ್ಲಿ 7.05 ಕೋಟಿ ರೂ. ಸೇತುವೆಗಳ ಅಂದಾಜು ಈವರೆವಿಗೆ ಒಪ್ಪಿತವಾಗಿದೆ. ಈ ವರೆಗೆ ಇ ವೆಚ್ಚವಾಗಿರುವುದಿಲ್ಲ.

ಕ್ಕನಾಯನಹಳ್ಳಿ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳು

2016 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನ ಹಳ್ಳಿಯ ಜೆ.ಎಂ.ಎಫ್.ಸಿ ಹಾಗೂ ಪ್ರಥಮದರ್ಜೆ ಕಾಲೇಜಿನ ಕಟ್ಟಡದ